## ಕೇಳಿ ತಿಳಿಯಿರಿ

**?** ಜೀವನದಲ್ಲಿ ಕಷ್ಟನಷ್ಟಗಳು ಬಂದಾಗ ದೇವರ ಪೂಜೆ ಇತ್ಯಾದಿಗಳನ್ನು ರೂಢಿಸಿಕೊಂಡಿರುವ ಧಾರ್ಮಿಕ ವ್ಯಕ್ತಿಗಳೂ ಶ್ರದ್ಧೆ ಕಳೆದುಕೊಂಡು, ನಿಃಕತನವನ್ನು ಬೆಳೆಸಿಕೊಂಡುಬಿಡುವುದು ಕಂಡು ಬರುತ್ತದೆ. ಏಕೆ? ಹೀಗಾಗದಿರಲು ಏನು ಮಾಡಬೇಕು?

— **ಓರ್ವ ಭಕ್ತೆ**

ಸಾಂಪ್ರದಾಯಿಕ ರೀತಿಯಲ್ಲಿ ಯಾಂತ್ರಿಕವಾಗಿ ಅನುಸರಿಸುವ ದೇವರ ಪೂಜೆ ಮುಂತಾದ ಧಾರ್ಮಿಕ ಕ್ರಿಯೆಗಳು ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನು ಉಂಟುಮಾಡುವುದಿಲ್ಲ. ಆಧ್ಯಾತ್ಮಿಕ ಮನೋಭಾವದಿಂದ ಕೂಡಿದ್ದು ಉನ್ನತ ನೈತಿಕ ಜೀವನವನ್ನೂ ನಡೆಸಿದರೆ, ಜೀವನದ ಎಂತಹ ವೈಪರೀತ್ಯಗಳನ್ನೂ ಎದುರಿಸುವ ಮನೋಬಲ ನಮಗೆ ಬರುತ್ತದೆ. ನೈತಿಕ ಬಲ, ಆಧ್ಯಾತ್ಮಿಕ ಬಲಗಳಿಲ್ಲದೆ ಕೇವಲ ಗೊಡ್ಡು ಧರ್ಮಾಚರಣೆಯಿಂದ ಯಾವ ಪ್ರಯೋಜನವೂ ಇಲ್ಲ. ಪೂಜೆಯ ಹಿಂದೆ ಪೂಜ್ಯಭಾವ ಇದ್ದರೆ ಮಾತ್ರ ನಾವೂ ಪೂಜ್ಯರಾಗುತ್ತೇವೆ. ಅಂದರೆ ನಮ್ಮ ವ್ಯಕ್ತಿತ್ವ ಹಿರಿದಾಗಿ ಬೆಳೆಯುತ್ತದೆ. ನಾವು ಹಿರಿದಾಗುತ್ತ ಹೋದಂತೆ ಜೀವನದ ಸಮಸ್ಯೆಗಳು ಕಿರಿದಾಗುತ್ತವೆ. ನಾವು ಸಣ್ಣವರಾಗಿದ್ದರೆ ಜೀವನದ ಸಣ್ಣ ಸಣ್ಣ ಸಮಸ್ಯೆಗಳೂ ದೊಡ್ಡದಾಗಿ ಕಾಣಿಸುತ್ತವೆ. ನಾವೇ ಸಮಸ್ಯೆಗಳನ್ನು ಮೀರಿ ಬೆಳೆಯಬೇಕು.

ಸ್ವಾಮಿ ವಿವೇಕಾನಂದರು ಹೇಳಿದ ಕಥೆಯನ್ನು ನೆನಪಿಸಿಕೊಳ್ಳೋಣ. ಒಂದು ಎತ್ತಿನ ಕೊಂಬಿನ ಮೇಲೆ ಒಂದು ನೊಣ ಕುಳಿತುಕೊಂಡಿತ್ತು. ಸ್ವಲ್ಪ ಹೊತ್ತಾದ ಮೇಲೆ ನೊಣ ಹೇಳತೊಡಗಿತು: "ಎಲೈ ಎತ್ತೇ, ನಾನು ಬಹಳ ಸಮಯದಿಂದ ನಿನ್ನ ಕೋಡಿನ ಮೇಲೆ ಕುಳಿತುಕೊಂಡಿದ್ದೇನೆ. ಇದರಿಂದ ನಿನಗೆ ತುಂಬ ತೊಂದರೆಯಾಗುತ್ತಿರಬಹುದು. ನಾನು ಹೊರಟು ಹೋಗಲೆ?" ಎತ್ತಿಗೆ ಆಗಲೇ ಗೊತ್ತಾದದ್ದು, ತನ್ನ ಕೊಂಬಿನ ಮೇಲೆ ಒಂದು ನೊಣ ಕುಳಿತುಕೊಂಡಿದೆಯೆಂದು! ಅದು ಹೇಳಿತು: "ಎಲೈ, ನನ್ನ ನೆಚ್ಚಿನ ಬಂಧುವೆ, ನನಗೇನೂ ತೊಂದರೆಯಿಲ್ಲ. ನಿನ್ನ ಇಡೀ ಕುಟುಂಬವನ್ನೇ ಕರೆದುಕೊಂಡು ಬಂದು ನೀನು ಅಲ್ಲಿ ನೆಲೆಸಬಹುದು." ಎತ್ತಿನ ಗಾತ್ರಕ್ಕೆ ನೊಣ ಏನೂ ಅಲ್ಲ. ಅಂತೆಯೇ ಯಾವ ಸಮಸ್ಯೆಯೂ ನಮ್ಮ ಪಾಲಿಗೆ ಏನೂ ಅಲ್ಲ ಎನ್ನುವಷ್ಟರ ಮಟ್ಟಿಗೆ ನಾವು ಬೆಳೆಯಬೇಕು.

**?** ಹಿಂದೂ ಧರ್ಮದಲ್ಲಿ ದೇವನೊಬ್ಬ ನಾಮ ಹಲವು ಎಂಬ ತತ್ತ್ವವಿದೆ. ಹಲವು ನಾಮದ ದೇವರು. ಅದರಂತೆ ಬೇರೆ ಬೇರೆ ಬೇರೆ ಆರಾಧಕರು ಇದ್ದಾರೆ. ಗುರುವಿನಿಂದ ಮಂತ್ರೋಪದೇಶ ಪಡೆದವರು ಇಷ್ಟದೇವರಲ್ಲದ ಸ್ಥಾನಕ್ಕೆ ಹೋದ ಸಂದರ್ಭದಲ್ಲಿ, ಆಶ್ರಮ, ಮಂದಿರಕ್ಕೆ ಹೋದಾಗ ಅಲ್ಲಿ ಯಾವ ಭಾವನೆ ಇರಬೇಕು? ಕೆಲವರು ಇಷ್ಟದೇವರಲ್ಲದ ಆಶ್ರಮ, ಮಠಕ್ಕೆ ಹೋಗುವುದೇ ಇಲ್ಲ. ಇದು ಸರಿಯೇ?

**—ಮಧುಕರ, ಡಿ.ಶೆಟ್ಟಿ, ಶಿರಸಿ**

'ಇಷ್ಟನಿಷ್ಠೆ' ಎನ್ನುವುದು ಹಿಂದೂ ಧರ್ಮದ ಒಂದು ವೈಶಿಷ್ಟ್ಯ. ಈ ಭಾವನೆಯ ಪ್ರಕಾರ ಭಕ್ತನು ಎಲ್ಲ ದೇವದೇವತೆಗಳನ್ನು ಗೌರವಿಸಿದರೂ ತನಗೆ ಇಷ್ಟವಾದ ಯಾವುದೋ ಒಂದು ದೇವತೆಯಲ್ಲಿ ಏಕನಿಷ್ಠನಾಗಿರುತ್ತಾನೆ. ಈ ರೀತಿಯ ಏಕನಿಷ್ಠೆಯು ಸಾಧನೆಗೆ ಅತ್ಯಂತ ಆವಶ್ಯಕ. ಎಲ್ಲ ದೇವರನ್ನೂ ಪೂಜಿಸಿ ಯಾರೊಬ್ಬ ದೇವರಲ್ಲಿಯೂ ತೀವ್ರವಾದ ಭಕ್ತಿ ಇಲ್ಲದಿದ್ದರೆ ಸಾಧನೆಯಲ್ಲಿ ಮುಂದುವರಿಯಲು ಆಗುವುದಿಲ್ಲ. ವಿದ್ಯಾರ್ಥಿಗಳು ಮೊದಲು ಅನೇಕ ವಿಷಯಗಳನ್ನು ಅಧ್ಯಯನ ಮಾಡುತ್ತಾರೆ. ಅವರು ಮುಂದುವರಿದಂತೆ ಅವರ ಅಧ್ಯಯನದ ಕ್ಷೇತ್ರ ಕಿರಿದಾಗುತ್ತ ಬಂದು ಕೊನೆಯಲ್ಲಿ ಯಾವುದೋ ಒಂದು ವಿಷಯವನ್ನು ಆಳವಾಗಿ ಅಧ್ಯಯನ ಮಾಡಿ ಅದರಲ್ಲಿ ವಿಶೇಷ ಪರಿಣತಿಯನ್ನು ಪಡೆಯುತ್ತಾರೆ (specialization). ಹಾಗೆಯೇ ಸಾಧಕರು ಪ್ರಾರಂಭದಲ್ಲಿ ಹಲವು ದೇವತೆಗಳನ್ನು ಆರಾಧಿಸಿದರೂ ಕೊನೆಯಲ್ಲಿ ಒಂದೇ ದೇವತೆಯನ್ನು ಏಕನಿಷ್ಠೆಯಿಂದ ಆರಾಧಿಸುವುದು ಆವಶ್ಯಕ. ಇಲ್ಲದಿದ್ದರೆ ಮಾನಸಿಕ ಏಕಾಗ್ರತೆ ಉಂಟಾಗುವುದಿಲ್ಲ. ಆದರೆ ಈ ಏಕನಿಷ್ಠೆ ಇತರ ದೇವದೇವತೆಗಳನ್ನು ಅಲ್ಲಗಳೆಯುವುದಕ್ಕೆ ಅಥವಾ ದ್ವೇಷಿಸುವುದಕ್ಕೆ ಎಡೆಮಾಡಿಕೊಡಬಾರದು. ಆ ರೀತಿ ಆದರೆ ಅದು ಯಥಾರ್ಥ ಭಕ್ತಿಯಾಗುವುದಿಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ ಅನೇಕರಿಗೆ ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದೆಂದರೆ ಇನ್ನೊಬ್ಬ ವ್ಯಕ್ತಿಯನ್ನು ದ್ವೇಷಿಸುವುದು. ಹಾಗೆಯೇ ಇತರ ದೇವದೇವತೆಗಳನ್ನು ದ್ವೇಷಿಸುವುದು ಮತ್ತು ಆ ದೇವ ದೇವತೆಗಳ ಆರಾಧಕರನ್ನೂ ದ್ವೇಷಿಸುವುದು ಹಾಗೂ ಸಾಧ್ಯವಾದರೆ ಅವರನ್ನು ನಿರ್ನಾಮ ಮಾಡುವುದು. ಇದು ಮತಾಂಧತೆ, ಭಕ್ತಿಯಲ್ಲ.

ಗುರುವಿನಿಂದ ಮಂತ್ರೋಪದೇಶ ಪಡೆದವರು ತಮ್ಮ ಇಷ್ಟದೈವದಲ್ಲಿ ನಿಷ್ಠರಾಗಿರಬೇಕು. ಆದರೆ ಬೇರೆ ದೇವರ ಸ್ಥಾನಗಳಿಗೆ ಅಥವಾ ಆಶ್ರಮಗಳಿಗೆ ಹೋದಾಗ ಆಯಾಯ ದೇವದೇವತೆಗಳಲ್ಲಿ ತಮ್ಮ ಇಷ್ಟದೇವತೆಯನ್ನೇ ಆರೋಪಿಸಿ ಅವುಗಳಿಗೆ ಆದರವನ್ನು, ಸಮ್ಮಾನವನ್ನು ತೋರಿಸಬೇಕು. ಎಲ್ಲ ದೇವದೇವತೆಗಳೂ ನಮ್ಮ ಇಷ್ಟದೇವತೆಯ ಸ್ಮರಣೆಗೆ ಸಹಾಯಕರಾಗಬೇಕು. ಇದಕ್ಕೆ ಸ್ವಾಮಿ ವಿವೇಕಾನಂದರು ಒಂದು ಉದಾಹರಣೆ ಕೊಡುತ್ತಾರೆ: ಆನೆಗೆ ಹೊರಚಾಚಿಕೊಂಡಿರುವ ಎರಡು ದಂತಗಳಿರುತ್ತವೆ. ಅವು ಕೇವಲ ಲಕ್ಷಣಕ್ಕೆ ಅಷ್ಟೇ. ಆದರೆ ಅದು ಆಹಾರವನ್ನು ಅಗಿಯುವುದು ಒಳಗಿರುವ ಹಲ್ಲುಗಳಿಂದ. ಹಾಗೆಯೇ ನಾವು ಹೊರಗೆ ಎಲ್ಲ ದೇವದೇವತೆಗಳನ್ನೂ ಆರಾಧಿಸಬೇಕು, ಆದರೆ ನಮ್ಮ ಒಳಗೆ ನಮ್ಮ ಇಷ್ಟದೇವತೆಗೇ ಬದ್ಧರಾಗಿರಬೇಕು. ಶ್ರೀರಾಮಕೃಷ್ಣರು ಕೊಡುವ ಉದಾಹರಣೆ ತುಂಬ ಸೂಕ್ತವಾಗಿದೆ: ಸೊಸೆ ಮನೆಯಲ್ಲಿ ಎಲ್ಲರನ್ನೂ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ, ಆದರೆ ತನ್ನ ಪತಿಯೊಡನೆ ವಿಶೇಷ ಸಂಬಂಧವನ್ನು ಇಟ್ಟುಕೊಂಡಿರುತ್ತಾಳೆ.